3. ಮೇಲ್ಕಂಡ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರಕಾರದ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿಯಲ್ಲಾ ಮುನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಶೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಪುರು ಡಿಪಾಜಿಟ್ ಮೊಬಲಗು ಭರ್ತಿಗೆ ಬಳಪಟ್ಟು ಅಪ್ಸೈರ್ ಫಡದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ' ಸೂರ್ಯಾಸ್ತಮಯಕ್ಕೆ ಮುಂಚಿಯೇ ಅಪ್ಸೈರ್ ಫಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಫಡದರಖಾಸ್ತುದಾರನು ಡಿಪಾಜಿಟ್ ಆಫವಾ ವಿಕ್ರಯದ ಬಾಕಿ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲು ಅವನಿಗೆ ಸಪ್ಪಕ್ಕ ರವಾಗಿಯೂ ಸದರೀ ಜಮೀನ್ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ವಿನಾದರು ಹುಟ್ಟಿದರೆ ಅದಕ್ಕೆ. ಅವನಿಗೆ ಯಾವ ಹಕ್ಕು ಇರಲಾರದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಪುರು ಮೂರು ಸಾಲ್ ಆಕಾರ ವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಕ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲೀ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯಿತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಪುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಒರಪ ಮೂಲಕವಾಗಿ ಜರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನು ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ್ನ		ಷರಾ.
				ಸರ್ವೆ ನಂಬರ್.	ಅಕ್ಕರ.	
ಯಲ್ಲಮಳ್ಳಲು ಅಡಿಗೆ ಪೈಲ್ 121ನೇ ಪೈಕಿ. 33ನೇ ಪೈಕಿ.	ಕೆರ್ಕಹಳ್ಳಿ ಎಸ್ಟೇಟು ಮೆಸ್ಸರ್ಸ ಸ. ಎಚ್. ಬೌಲ್ಸ್ ಸಾಹೇಬರವರು.	ಮೇಗುಂಡ ಹೊಣ್ಣಿ ಅಡಿಗೆಪೈಲ್ ಎಲೆ ಸಳ್ಳಲು	ಹಾಲೀರೀ ಸರ್ವೆಯಿಂದ ಜಮೀನು ಮೇಲೆ ಹದ್ದುಬಸ್ತು ಮಾಡಿರುವಂತೆ ಬಾಂದು 6 ಕಲ್ಲು 6	100–38	100 ಅಥವಾ 150 ರೂಪಾಯಿಗಳು.	ಅಪ್ಸೈಸು ದರಖಾಸ್ತು ದಾರನ ಖಾಯಿಷ್ಕ ನಂಬಿ ಆಕಾರ ದಾವಲು ಮಾಡಬಹುದು.
			ಹಾಲಿ ಸರ್ವೆಯಿಂದ ಗುರ್ತಿಸಿರುವಂತೆ ಬಾಂದು 6 ಕಲ್ಲು 6	32—2	(32 ಅಥವಾ 48)	

ತಿಳುವಳಿಕೆ ಷರಾ,—ಬಂದು ಸರ್ವೆ ನಂಬರು ಪೈಕಿ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕರ್ಚಾ ಅಳತೆ ಪ್ರಕಾರ ಅಂದಾಜು ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರಿಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲು ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡೆಯುವದಕ್ಕೇ ಆಗಲಿ ಜಮೀನ್ ಹಿಡುವಳೀದಾರನು ಬದ್ಧವಾಗಿರಬೇಕು.

ಟಿ. ವಿಯರ್,
ಡೆಪ್ಯೂಟಿ ಕಮ್ಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖೆ.
ಇಸ್ತಿಹಾರ್‌ನಾಮೆ.

ತಾರೀಖು 1ನೇ ಡಿಸೆಂಬರ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಮಾರ್ಜಿನ್‌ನಲ್ಲಿ ಕಂಡ ತಾಲ್ಲೂಕು ಖಾನೆಗಳಲ್ಲಿ ಸಂದಲ್ ತುಕಡಾಗಳು ಸ್ವಂತ ಉಪಯೋಗಕ್ಕೋಸ್ಕರ ಚಿಲ್ಲರೆಯಾಗಿ ಬಿಕರಿ ಮಾಡಲ್ಪಡುತ್ತೆ. ಇಷ್ಟಪುಳ್ಳವರು ಕ್ರಯಕ್ಕೆ ಪಡಿಯಬಹುದು.

ದಾವಣಗೆರೆ, ಹೊಳಲಕೆರೆ, ಚಿತ್ರದುರ್ಗ.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ನೋಟಿಸ್.

ತಾರೀಖು 8ನೇ ಡಿಸೆಂಬರ್ 1896.

ಇದರಿಂದ ಡಿಸ್ಟ್ರಿಕ್ಟ್ ಮುಳೆ ಇರುವ ತಮಾಂ ತಾಲ್ಲೂಕು ಪೊಲೀಸಿನವರು ಮತ್ತು ಗ್ರಾಮ ನಾಕರರಿಗೂ ತಿಳಿಯಪಡಿಸುವ ದೇನಂದರೆ,—ಮಾರ್ಜಿನಿನಲ್ಲಿ ನಮೂದಿಸುವ ತಾಲ್ಲೂಕುಗಳಲ್ಲಿರುವ ತಂಗಡಿ ಚಕ್ಕೆ ಜ.

ಹೊಳಲಕೆರೆ,—ದಾವಣಗೆರೆ.
ಜಗಲೂರು,—ಮೊಳಕಾಲ್ಮೂರು.

ಮಾನಪೆ ಹಕ್ಕನ್ನು 1896ನೇ ನವೆಂಬರ್ ಗುರ್ರೇ ಲಾಗಾಯತು 1897ನೇ ಜೂಲೈ ಅಖೈರ್ ವರಿವಿಗೆ ಹರಾಜು ಮಾಡಲ್ಪಟ್ಟಿದೆ. ಬಾಕಿ ತಾಲ್ಲೂಕುಗಳಲ್ಲಿ ತಂಗಡಿಚಕ್ಕೆ ಜಮಾಯಿಸಲು ಲೈಸೆನ್ಸ್ ಕೊಡುವದನ್ನು ಮನ್ನಾ ಮಾಡಿರುತ್ತೆ. ಮನ್ನಾ ಮಾಡಿರತಕ್ಕ ತಾಲ್ಲೂಕುಗಳ ಗ್ರಾಮದ ಸರಹದ್ದಿನಲ್ಲಿ ಸರ್ಕಾರಿ ಬಂಜರ್ ಜಮೀನಿನಲ್ಲಿ ಯಾರೂ ತಂಗಡಿಚಕ್ಕೆ ಜಮಾಯಿಸಕೂಡದು. ಹಾಗೆ ಜಮಾಯಿಸಿದಲ್ಲಿ ಕಳುವಿನಿಂದ ಜಪ್ತಾಯಿಸಿದಂತೆ ಭಾವಿಸಿ ಪೊಲೀಸಿನವರು ಮತ್ತು ಗ್ರಾಮ ನಾಕರರು ಕ್ರಮವಾಗಿ ತಾಲ್ಲೂಕು ಮ್ಯಾಜಿಸ್ಟ್ರೇಟರಲ್ಲಿ ಪ್ರಾಸಿಕ್ಯೂಷ್ಟ್ ಮಾಡಬೇಕು. ಇಂಥಾ ಮೊಕದ್ದಮೆ ಪತ್ತೇಮಾಡಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಿದಲ್ಲಿ ಅಂಥಾ ಪತ್ತೇ ತರದೂದು ನಡಿಸಿದವರಿಗೆ ಮುನಾಸಬ್ ಇನಾಂ ಕೊಡಲು ಸಿಫಾರಸ್ ಮಾಡಲಾಗುತ್ತೆ.

ಎಂ. ಎಸ್. ನಾರಾಯಣರಾವ್,
ಡೆಪ್ಯೂಟಿ ಕಮ್ಮಿಷನರ್.

ಪ್ರಕಟನೆ.

ಮೈಸೂರು ಗವರ್ಮೆಂಟ್ ಓರಿಯಂಟಲ್ ಲೈಬ್ರರಿಗೆ ಸಂಬಂಧಪಟ್ಟ ಈ ಕೆಳಗೆ ನಮೂದಿಸಿರುವ ಪುಸ್ತಕಗಳು ಬೆಂಗಳೂರು ಗವರ್ಮೆಂಟ್ ಸೆಂಟ್ರಲ್ ಬುಕ್ ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ.

	ರೂ. ಆ. ಪೈ.
ನಂ. 1. ಆಪಸ್ತಂಭ ಗೃಹ್ಯಸೂತ್ರ	1-12—0
ನಂ. 2. ಆಪಸ್ತಂಭ ಪರಿಭಾಷಾಸೂತ್ರ	1—0—0
ನಂ. 3. ಮಾಧವಾಚಾರ್ಯ ಕೃತ ಧಾತುವೃತ್ತಿ. 2ನೇ ಸಂಪುಟ 1ನೇ ಭಾಗ ..	2—0—0
ನಂ. 4. ಕೃಷ್ಣಯಜುರ್ವೇದ ತೈತ್ತಿರೀಯಸಂಹಿತೆ, 1ನೇ ಸಂಪುಟ ..	2—8—0
ನಂ. 5. ಕೃಷ್ಣಯಜುರ್ವೇದ ತೈತ್ತಿರೀಯಸಂಹಿತೆ, 2ನೇ ಸಂಪುಟ ..	2—8—0
ನಂ. 6. ಶ್ರೀಶಂಕರಾಚಾರ್ಯ ವಿರಚಿತ ದಕ್ಷಿಣಾಮೂರ್ತಿಸ್ತೋತ್ರ ..	1—4—0
ನಂ. 7. ಕೃಷ್ಣಯಜುರ್ವೇದ ತೈತ್ತಿರೀಯಸಂಹಿತೆ, 3ನೇ ಸಂಪುಟ ..	3—0—0
ನಂ. 8. ಭಗವದ್ಗೀತ	2-12—0
ನಂ. 11. ಸೌಂದರ್ಯಲಹರಿ	1—8—0

ತಾರೀಖು 7ನೇ ಡಿಸೆಂಬರ್ 1896ನೇ ಇಸವಿ
ಬೆಂಗಳೂರು.

ನೋಟಿಸ್.

ಈ ಕೆಳಗೆ ನಮೂದಿಸಿರುವ ಪುಸ್ತಕವು ಬೆಂಗಳೂರು ಗವರ್ಮೆಂಟ್ ಸೆಂಟ್ರಲ್ ಬುಕ್ಕು ಡಿಪೋವಿನಲ್ಲಿ ದೊರಿಯುತ್ತದೆ.

1897ನೇ ಇಸವಿಯ ಸಂಸ್ಕೃತ ಲೋವರ್ ಸೆಕಂಡರಿ ಟಿಕಸ್ಟ್ ಬುಕ್ಕು. ಕ್ರಯ 2 ಆಣೆ.

ಎಸ್. ಅಬ್ದುಲ್ ಹೈ,
ಕ್ಯೂರೇಟರ್.

ನೋಟಿಸ್.

ಜನಗಳ ಉಪಯೋಗಕ್ಕೋಸ್ಕರ ನೇತ್ರಗಳಿಗೆ ಔಷಧಿ ಹಾಕತಕ್ಕ ಬಂದು ಸರ್ಕಾರದ ವೈದ್ಯಶಾಲೆಯು ಬೆಂಗಳೂರು ತಾಲ್ಲೂಕು ಕುಚೇರಿ ರೋಡಿನಲ್ಲಿ ಸ್ಥಾಪಿಸಲ್ಪಟ್ಟಿರುತ್ತೆ. ಧರ್ಮಾರ್ಥವಾಗಿ, ಅಸಿಸ್ಟೆಂಟ್ ಸರ್ಜ್ ಎಸ್. ವಿ. ರಾಮಸ್ವಾಮಿ ಆಯ್ಯಂಗಾರ್ರವರು, ನೇತ್ರ ರೋಗದಿಂದ ಪೀಡಿತರಾದವರನ್ನು ಪ್ರತಿ ದಿನವೂ ಬೆಳಿಗ್ಯೆ 7 ಘಂಟೆ ಲಾಗಾಯತು 11 ಘಂಟೆ ವರಿವಿಗು ಚಿಕಿತ್ಸೆ ಮಾಡುವರು.

ಪಿ. ಎಚ್. ಬ್ರೌನ್, ಎಂ. ಬಿ.,
ಸೀನಿಯರ್ ಸರ್ಜನ್ ಯು ಸ್ಯಾನಿಟರಿ ಕಮ್ಮಿಷನರ್,
ಮೈಸೂರ್ ಗವರ್ಮೆಂಟ್.

Mysore Govt. Central Press, Bangalore.—1896.